

ಚಿತ್ರಗಳು: ಮುರಳೀಧರ ರಾಠೋಡ

'ಪಕ್ಕದ ಸೈಟನ್ನ ಯಾರೋ ಕೊಂಡ್ಕೊಂಡಿದಾರಂತೆ, ನಾವು ಹಾಕ್ಕೊಂಡಿರೋ ಗಿಡಾನೆಲ್ಲಾ ಕ್ಲೀನ್ ಮಾಡ್ಬೇಕಂತೆ, ಇನ್ನೊಂದ್ ವಾರದ ಒಳ್ಗೆ ಮನೆ ಪಾಯ ಶುರೂ ಮಾಡ್ತಾರಂತೆ.'

ಮನೆ ಹೊಕ್ಕುತ್ತಿರುವಂತೇ ಹೆಂಡತಿಯ ಮಾತುಗಳನ್ನು ಕೇಳಿ ಕೆಂಡಾಮಂಡಲನಾದ ಗೋವಿಂದರಾಯ. ತನ್ನ ಹಳೆಯ ಕಾರನ್ನು ಆ ಪಕ್ಕದ ಸೈಟಿನಲ್ಲಿ ಪಾರ್ಕ್ ಮಾಡಲು ವ್ಯವಸ್ಥೆ ಮಾಡಿಕೊಂಡು ತಿಂಗಳು ಕೂಡ ಆಗಿರಲಿಲ್ಲ. ಏಕಾಏಕಿ ಅದನ್ನೆಲ್ಲ ಕಿತ್ತೆಸೆ ಎಂದರೆ ಹೇಗೆ? ಆದರೆ ಗೋವಿಂದರಾಯ ಕೋಪಗೊಳ್ಳಲು ಅದಕ್ಕಿಂತ ಹೆಚ್ಚಿನ ಕಾರಣವಿತ್ತು. ತನ್ನ ಮುಖ್ಯ ವೃತ್ತಿಯನ್ನೇ ರಿಯಲ್ ಎಸ್ಟೇಟ್ ಬ್ರೋಕರಿಕೆಯಾಗಿಸಿಕೊಂಡಿದ್ದ ಆತ, ಸತತ ಮೂರು ವರ್ಷ ತನ್ನದೇ ಮನೆಯ ಪಕ್ಕದ ಸೈಟಿನ ಓನರು ಯಾರೆಂಬುದನ್ನು ಕಂಡುಹಿಡಿಯಲು ಪಟ್ಟ ಪಾಡು ಅಷ್ಟಿಷ್ಟಲ್ಲ. ತನ್ನಂಥ ತಾನೇ ಓನರು ಯಾರೆಂಬುದನ್ನು ಕಂಡುಹಿಡಿಯಲಾಗದಿರುವಾಗ ಯಾರೋ ಬಂದು ಸೈಟು ಕೊಂಡಿದ್ದೇನೆ, ಮನೆ ಕಟ್ಟುತ್ತೇನೆ ಅಂದರೆ ಆತನ ಬ್ರೋಕರಿಕೆ ವೃತ್ತಿಗೇ ಎಸೆದ ಸವಾಲಲ್ಲದೇ ಮತ್ತಿನ್ನೇನು? 'ಯಾರದು ಬಂದದ್ದು? ಅವರ ನಂಬರು, ಡೀಟೇಲುಗಳನ್ನೆಲ್ಲ ತೆಗೆದುಕೊಳ್ಳದೇ ಬಿಟ್ಟದ್ದೇಕೆ?' ಎಂದೆಲ್ಲಾ ಹೆಂಡತಿಯ ಮೇಲೆ ಅಸಮಾಧಾನಗೊಂಡ.

★★★